# : ಗೃಹ ಇಲಾಖೆ ಟಿಪ್ಪಣಿ :

## ರಾಜ್ಯದಲ್ಲಿ ಮಹಿಳೆಯವರ ಮೇಲೆ ಅತ್ಯಾಚಾರ ಮತ್ತು ಕಾನೂನು ಅವ್ಯವಸ್ಥೆ

- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಮಹಿಳೆಯರ ಮೇಲೆ ಅತ್ಯಾಚಾರದ ಬಗ್ಗೆ ಕಳೆದ ಒಂದು ವಾರದಲ್ಲಿ ವ್ಯಾಪಕ ಚರ್ಚೆ.
- ದಿನಾಂಕ:30.12.2013ರಂದು ರಾಜ್ಯದಲ್ಲಿ ನಡೆಯುತ್ತಿರುವ ಒಂದಂಕಿ ಲಾಟರಿ ಮತ್ತು ಮಟ್ಕಾ ದಂಧೆಯನ್ನು ನಿಲ್ಲಿಸಲು ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವ ಬಗ್ಗೆ ಸರ್ಕಾರಕ್ಕೆ ಪತ್ರ.
- ಒಂದಂಕಿ ಲಾಟರಿ ಮಾರಾಟದ ಜಾಲ ಮೆಜೆಸ್ಟಿಕ್‌ನ ಉಪ್ಪಾರಪೇಟೆ ಪೊಲೀಸ್ ಠಾಣೆಯ ಹಿಂಭಾಗ.
- ಗೃಹಮಂತ್ರಿ ಮತ್ತು ಮುಖ್ಯಮಂತ್ರಿ ರವರುಗಳು ಹೆಚ್‌ಡಿಕೆ ರವರ ಬೇಜಾವಾಬ್ದಾರಿ ಹೇಳಿಕೆ ಮತ್ತು ಬಾಯಿ ಚಪಲ.
- ಗೃಹಮಂತ್ರಿ ಕಾಟಾಚಾರಕ್ಕೆ ಸಭೆ ಕರೆದು ಸಭೆಗೆ ಒಂದು ಗಂಟೆ ವಿಳಂಬವಾಗಿ ಬಂದರು.
- ರಾಜ್ಯದಲ್ಲಿ ಮಹಿಳೆ ಮೇಲೆ ಅತ್ಯಾಚಾರ ಮತ್ತು ಕಾನೂನು ಅವ್ಯವಸ್ಥೆ ಒಂದು ವಾರದಿಂದಲ್ಲ. ಇದು ಹಲವಾರು ವರ್ಷಗಳಿಂದ ಇದ್ದು, ಈ ಸರ್ಕಾರ ಬಂದನಂತರ ಅತ್ಯಂತ ಅಧೋಗತಿಗೆ ಹೋಗಿದೆ.
- ಗೃಹ ಇಲಾಖೆಯನ್ನು ಗೃಹ ಮಂತ್ರಿ ನಿಯಂತ್ರಿಸುತ್ತಾರೋ, ಮುಖ್ಯಮಂತ್ರಿ ನಿಯಂತ್ರಿಸುತ್ತಾರೋ ಅಥವಾ ಮತ್ಯಾರು ನಿಯಂತ್ರಿಸುತ್ತಾರೋ?
- ಗೃಹ ಇಲಾಖೆ ನಿಯಂತ್ರಣದ ಬಗ್ಗೆ ಇಡೀ ರಾಜ್ಯದ ಜನತೆಗೆ ಗೊಂದಲವಿದೆ.
- ದಿನಾಂಕ:01.02.2014 ರಂದು ಡಿಜಿ&ಐಜಿಪಿ ಹಾಗೂ ಬೆಂಗಳೂರು ಸಿಟಿ ಕಮೀಷನರ್ ರವರಿಗೆ ಇಲಾಖೆ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ, ಈ ಕೆಳಕಂಡ ಮಾಹಿತಿ ಕೇಳಿದ್ದೆ.
  1. ಕಳೆದ 3 ವರ್ಷಗಳಲ್ಲಿ ವರ್ಷವಾರು ರಾಜ್ಯದಲ್ಲಿ ಹಾಗೂ ಬೆಂಗಳೂರು ನಗರದಲ್ಲಿ 18 ವರ್ಷ ವಯಸ್ಸಿಗಿಂತ ಕಡಿಮೆ ಮತ್ತು 18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹೆಣ್ಣುಮಕ್ಕಳು ಕಾಣೆಯಾಗಿರುವ ಪ್ರಕರಣಗಳ ಸಂಖ್ಯೆ, ಪತ್ತೆಯಾದವರ ಸಂಖ್ಯೆ.
  2. ಹುಡುಗಿಯರ ಮೇಲೆ ಅಶ್ಲೀಲ ವಿಡಿಯೋ ಮಾಡಿರುವ ಪ್ರಕರಣಗಳ ವಿವರ ಮತ್ತು ಇದರಲ್ಲಿ ಮೃತಪಟ್ಟವರ ವಿವರ.
  3. ಇದರಲ್ಲಿ ಮದುವೆಯಾದವರ ವಿವರ.
  4. ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ವರ್ಷವಾರು ದಾಖಲಾದ ಸಿಮಿಸ್ (Form 76A) ಮತ್ತು ಎನ್‌ಸಿಆರ್ ಪ್ರಕರಣಗಳ ಸಂಖ್ಯೆ.
  5. ಸಿಆರ್‌ಪಿಸಿ 154 ರನ್ವಯ ದಾಖಲಾದ ಎಫ್‌ಐಆರ್ ಗಳ ವಿವರ.
  6. ಸಿಮಿಸ್ ಮತ್ತು ಎನ್‌ಸಿಆರ್ ಗಳಲ್ಲಿ ಜೀವ ಬೆದರಿಕೆಗಳ, ಭೂ–ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣಗಳ ಸಂಖ್ಯೆ.
  7. ಸಿವಿಲ್ ನ್ಯಾಯಾಲಯದ ಆದೇಶದಂತೆ ಭೂ–ವಿವಾದಗಳಿಗೆ ಸಂಬಂಧಿಸಿದಂತೆ ಆದೇಶದ ಪರ ದಾಖಲಿಸಿದ ಎನ್‌ಸಿಆರ್‌ಗಳ ಸಂಖ್ಯೆ.
  8. ಬೆಂಗಳೂರು ನಗರದಲ್ಲಿ ಕಳೆದ 02 ವರ್ಷಗಳಲ್ಲಿ ವರ್ಷವಾರು ಎಷ್ಟು ಪ್ರಕರಣಗಳಲ್ಲಿ ರೌಡಿ ಶೀಟರ್ ತೆಗೆಯಲಾಗಿದೆ? ಅವುಗಳ ವಿವರ.
  9. ಇದರಲ್ಲಿ ಮರಳು ಸಾಗಾಣಿಕೆದಾರರ ವಿವರ.

10. ಕನ್ನಡಪರ ಹೋರಾಟಗಾರರ, ಸಂಘ–ಸಂಸ್ಥೆಗಳ ಸದಸ್ಯರ ಮೇಲೆ ತೆಗೆಯಲಾಗಿರುವ ರೌಡಿ ಶೀಟರ್‌ಗಳ ಸಂಖ್ಯೆ.
11. Public Nuisance ಮಾಡಿರುವ ಪ್ರಕರಣಗಳಲ್ಲಿ ಗಡಿಪಾರು ಮಾಡಿರುವ ವಿವರ.
12. ಐಪಿಸಿ 302, 307 ರನ್ವಯ Attempt to Murder ಮಾಡಿರುವವರಿಗೆ ಎಷ್ಟು ಜನಕ್ಕೆ ರೌಡಿ ಶೀಟರ್ ತೆಗೆಯಲಾಗಿದೆ. ಎಷ್ಟು ಗಡಿಪಾರು ಮಾಡಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಗೂಂಡಾ ಕಾಯ್ದೆ ಪ್ರಕರಣ ದಾಖಲಾಗಿದೆ.
13. ಕಳೆದ 03 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ವರ್ಷವಾರು ವರದಕ್ಷಿಣೆ ಕಿರುಕುಳ ಮತ್ತು ಸಾವಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಸಂಖ್ಯೆ.
14. ಅದರಲ್ಲಿ ಆಸ್ತಿ, ಒಡವೆಗಳನ್ನು ರಿಕವರಿ ಮಾಡಲಾದ ಪ್ರಕರಣಗಳ ಸಂಖ್ಯೆ.
15. ಕಳೆದ ಒಂದು ವರ್ಷದಲ್ಲಿ ಒಂದಂಕಿ ಲಾಟರಿ ಮತ್ತು ಮಟಕಾ ಪ್ರಕರಣಗಳಲ್ಲಿ ಎಷ್ಟು ಪ್ರಕರಣ ದಾಖಲಾಗಿವೆ? ವಿವರ
16. ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಅಕ್ರಮ ಮದ್ಯ ಸಾಗಾಣಿಕೆ ಮತ್ತು ಮಾರಾಟ ಪ್ರಕರಣಗಳು ದಾಖಲಾಗಿರುವ ವಿವರ.

ಮೇಲ್ಕಂಡ ಮಾಹಿತಿಯನ್ನು ನೀಡುವಂತೆ ಡಿಜಿ&ಐಜಿಪಿ ಹಾಗೂ ಬೆಂಗಳೂರು ಸಿಟಿ ಕಮೀಷನರ್ ರವರು ಪೊಲೀಸ್ ಠಾಣೆಗಳಿಗೆ ಅರ್ಜಿಯನ್ನು ರವಾನಿಸಿದ್ದಾರೆ. ಇದುವರೆವಿಗೂ ಮಾಹಿತಿ ಬಂದಿರುವುದಿಲ್ಲ.

- ಡಿಜಿ & ಐಜಿಪಿ, ಸಿಟಿ ಪೊಲೀಸ್ ಕಮೀಷನರ್ ಮತ್ತು ಗೃಹಮಂತ್ರಿಗಳಿಗೆ ಇಂತಹ ಸೂಕ್ಷ್ಮ ಮಾಹಿತಿ ಇಲ್ಲದೆ ಆಡಳಿತ ನಿರ್ವಹಣೆ ಹೇಗೆ ಮಾಡುತ್ತಿದ್ದಾರೆ.
- ಕಾಂಗ್ರೆಸ್ ಪಕ್ಷಕ್ಕೂ, ರೌಡಿಸಂ ಮತ್ತು ಸಮಾಜ ಘಾತುಕ ಶಕ್ತಿಗಳಿಗೆ ಅವಿನಾಭಾವ ಸಂಬಂಧ.
- ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಗೃಹಮಂತ್ರಿ ಎಷ್ಟು ಪೊಲೀಸ್ ಠಾಣೆಗೆ ಭೇಟಿ ನೀಡಿ, ರಿವ್ಯೂ ಮಾಡಿದ್ದಾರೆ.
- ಡಿಜಿಪಿ, ಎಡಿಜಿಪಿ, ಐಜಿಪಿ, ಡಿಐಜಿ, ಎಸ್‌ಪಿ ರವರೊಡನೆ ಮೀಟಿಂಗ್ ಮಾಡುವುದರಿಂದ ಯಾವುದೇ ವಾಸ್ತವ ಸ್ಥಿತಿ ತಿಳಿಯುವುದಿಲ್ಲ.
- ಗೃಹಮಂತ್ರಿ ಮತ್ತು ಬೆಂಗಳೂರು ಉಸ್ತುವಾರಿ ಸಚಿವರಿಗೆ ರಾಜ್ಯದ ಜನತೆಯ ಹಿತಾಸಕ್ತಿಗಿಂತ ಬೇರೆ ಯಾವ ಹಿತಾಸಕ್ತಿ ಇದೆಯೋ ಗೊತ್ತಿಲ್ಲ.
- ಇಲಾಖೆಯನ್ನು ಬಿಗಿ ಮಾಡುವುದೆಂದರೆ ಅಧಿಕಾರಿಗಳನ್ನು ಬಯ್ಯುವುದಲ್ಲ.
- ಗೃಹ ಇಲಾಖೆಯು ಅಸಮರ್ಥವಾಗಿದೆ ಎಂದರೆ ಬರೀ ಪೊಲೀಸರು, ಇನ್ಸ್‌ಪೆಕ್ಟರ್‌ಗಳು ಮಾತ್ರ ಕಾರಣರಲ್ಲ.
- ವ್ಯವಸ್ಥೆಯನ್ನು ಹಾಳು ಮಾಡಿದ ಕೀರ್ತಿ ಜನಪ್ರತಿನಿಧಿಗಳಿಗೂ ಸಲ್ಲುತ್ತದೆ.
- ವರ್ಗಾವಣೆಯಲ್ಲಿ ಭಾರಿ ದಂಧೆ.
- ಪ್ರಾಮಾಣಿಕ ಅಧಿಕಾರಿಗಳಿಗೆ ವರ್ಗಾವಣೆಯ ಶಿಕ್ಷೆ.
- ರಾಮನಗರ ಪೊಲಿಸ್ ಠಾಣೆಯಲ್ಲಿ ಸಾರ್ವಜನಿಕರೊಬ್ಬರಿಗೆ ಜನಪ್ರತಿನಿಧಿಯೊಬ್ಬರು ಪೊಲೀಸರ ಲಾಠಿಯಿಂದ ಥಳಿತ. ಆಡಳಿತ ಪಕ್ಷದ ಪ್ರತಿನಿಧಿಯೆಂದು ಪ್ರಕರಣ ಮುಚ್ಚಿ ಹಾಕಲಾಯಿತು.

- ಲೋಕಸಭಾ ಚುನಾವಣಾ ಸಂಧರ್ಭದಲ್ಲಿ ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಮೇಲೆ ಹಲ್ಲೆ ಮಾಡಿ, ಆತನ ಕಿವಿ ಹರಿಯಿತು. ಪಿಎಸ್‌ಐ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಮೇಲೂ ಕೂಡ ಹಲ್ಲೆ. ಹಲ್ಲೆ ಮಾಡಿದ ವ್ಯಕ್ತಿಯನ್ನು ಬಂಧಿಸಿದ್ದರೂ ಮೇಲಾಧಿಕಾರಿಗಳ ಮತ್ತು ರಾಜಕೀಯ ನಾಯಕರ ಒತ್ತಡದಿಂದ ಬಿಡುಗಡೆ ಮಾಡಿ ನಿರೀಕ್ಷಣಾ ಜಾಮೀನು ಪಡೆದರು.
- ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ದೃಷ್ಯ ಮಾಧ್ಯಮದಲ್ಲಿ ಪೊಲೀಸರ ಖಾಕಿ ಬಟ್ಟೆಯ ಮೇಲೆ ಖಾದಿ ಬಟ್ಟೆ ಆವರಿಸಿಕೊಂಡಿದೆ ಎಂದು ಹೇಳಿರುವುದು ವ್ಯವಸ್ಥೆಗೆ ಹಿಡಿದ ಕನ್ನಡಿ.
- ವ್ಯವಸ್ಥೆಯಲ್ಲಿ ಯಾವುದೇ ಸುಧಾರಣೆ ಆಗಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ಯಾವುದಾದರು ಅಹಿತಕರ ಘಟನೆ ನಡೆದರೆ ಒಬ್ಬ ಇನ್ಸ್‌ಪೆಕ್ಟರ್ ಫೋನ್ ಮಾಡಿ ACP, DCP, DIG (Law & Order), DIG (Crime), IGP (Law & Order), IGP (Admin) and Commissioner ರವರಿಗೆ ಮಾಹಿತಿ ನೀಡಬೇಕು. ಪ್ರತಿ ಅಧಿಕಾರಿ ಜೊತೆ 5 ನಿಮಿಷವೆಂದರೆ ಕನಿಷ್ಟ ಅರ್ಧ ಗಂಟೆ ಸಮಯ ಹಾಳಾಗುತ್ತದೆ. ಆನಂತರವಷ್ಟೆ ಘಟನೆಯ ಸ್ಥಳಕ್ಕೆ ಇನ್ಸ್‌ಪೆಕ್ಟರ್ ಹೋಗುತ್ತಾರೆ. ಅಂದರೆ ಈ ವ್ಯವಸ್ಥೆಯನ್ನು ಕೇಸಿನ ಆಧಾರದ ಮೇಲೆ ಕ್ರಮ ಕೈಗೊಳ್ಳಲು ಇನ್ಸ್‌ಪೆಕ್ಟರ್‌ಗೆ ಯಾವುದೇ ಅಧಿಕಾರ ಇಲ್ಲ. ಹಿರಿಯ ಅಧಿಕಾರಿಗಳ ಅನುಮತಿ ಪಡೆದ ನಂತರವಷ್ಟೆ ಪ್ರಕರಣ ದಾಖಲಾಗುತ್ತದೆ. ಮೊನ್ನೆಯ ರಫಿಕ್, ಇನ್ಸ್‌ಪೆಕ್ಟರ್ ಪ್ರಕರಣದಲ್ಲೂ ಕೂಡ ಎಫ್‌ಐಆರ್ ದಾಖಲಿಸದೇ ಇರುವುದು ಅವರೊಬ್ಬರ ತಪ್ಪಲ್ಲ. ವ್ಯವಸ್ಥೆಯ ತಪ್ಪು. ಇದು ಪೊಲೀಸ್ ಇಲಾಖೆಯ Hierarchy ಅನ್ವಯ ಹಿರಿಯ ಅಧಿಕಾರಿಗಳ ಅನುಮತಿ ಇಲ್ಲದೇ ಯಾವುದೇ ಪ್ರಕರಣ ದಾಖಲಾಗುವುದಿಲ್ಲ.
- ರಫೀಕ್ ರವರನ್ನು ಅಮಾನತ್ತು ಮಾಡಲಾಗಿದೆ. ನನ್ನ ಪ್ರಕಾರ ಈ ಪ್ರಕರಣದಲ್ಲಿ ACP, DCP, DIG (Law & Order), DIG (Crime), IGP (Law & Order), IGP (Admin), Commissioner ಮತ್ತು ಗೃಹಮಂತ್ರಿಗಳು ಸಮಾನ ಪಾಲುದಾರರು.
- ಯಾವುದೇ ಕೊಲೆ ಪ್ರಕರಣ ನಡೆದ ಒಂದೆರಡು ದಿನಗಳಲ್ಲಿ ಕೊಲೆಗಾರರನ್ನು ಬಂಧಿಸಿರುವುದಾಗಿ ಮುಖಕ್ಕೆ ಮುಸುಕು ಹಾಕಿ ಮಾಧ್ಯಮದಲ್ಲಿ ತೋರಿಸಲಾಗುತ್ತದೆ. ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗುತ್ತಿದೆ. ರಾಜ್ಯದಲ್ಲಿ ಇದರ ಪ್ರಮಾಣ ಕೇವಲ ಶೇ.2 ರಷ್ಟು.
- ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳನ್ನು ಸಿಆರ್‌ಪಿಸಿ 164 ರಡಿ ಮ್ಯಾಜಿಸ್ಟ್ರೇಟ್ ಎದುರು ಹೇಳಿಕೆ ದಾಖಲು ಮಾಡಲಾಗಿದೆ.
- ಪೊಲೀಸರ ಎದುರು ಅಪರಾಧಿಗಳು ಸಿಆರ್‌ಪಿಸಿ 162 ರಡಿ ನೀಡುವ ಹೇಳಿಕೆ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ. ಸಾಕ್ಷಿಗಳ ಕೊರತೆಯಿಂದ ಅಪರಾಧಿಗಳ ಖುಲಾಸೆ. ಇಂತಹ ಅಪರಾಧಿಗಳಿಗೆ ರೌಡಿ ಶೀಟರ್ ಕೂಡ ತೆರೆಯುವುದಿಲ್ಲ. ಹೊಟ್ಟೆ ಪಾಡಿಗೆ ಮರಳು ಸಾಗಾಣೆ ಮಾಡುವವರ ಮೇಲೆ ಮತ್ತು ಕನ್ನಡಪರ ಸಂಘಟನೆಗಳ ಮೇಲೆ, ರೈತರ ಮೇಲೆ ರೌಡಿ ಶೀಟರ್ ತೆರೆಯುತ್ತಾರೆ. ನಿಜ, ಕೊಲೆಗಡುಕರು, ರೇಪಿಸ್ಟ್‌ಗಳು ಮತ್ತು ಸಮಾಜ ಘಾತುಕ ಶಕ್ತಿಗಳ ಮೇಲೆ ರೌಡಿ ಶೀಟರ್ ತೆರೆಯುವುದಿಲ್ಲ, ಗಡಿಪಾರು ಮಾಡುವುದಿಲ್ಲ. ಗೂಂಡಾ ಕಾಯ್ದೆ ಅಡಿ ಪ್ರಕರಣ ದಾಖಲಿಸುವುದಿಲ್ಲ. ಈ ರೀತಿ ಕೊಲೆ, ಸುಲಿಗೆ ಮಾಡಿದರು ಒಂದೆರಡು ತಿಂಗಳಲ್ಲಿ ಬಿಡುಗಡೆಯಾಗುವಾಗ ಯಾರಿಗೆ ತಾನೇ ವ್ಯವಸ್ಥೆ ಬಗ್ಗೆ ಭಯ ಇರುತ್ತೆ.
- ಈ ಸರ್ಕಾರ ಬಂದ ಮೇಲೆ ಎಷ್ಟು ಜನರ ಮೇಲೆ ಗೂಂಡಾ ಕಾಯ್ದೆ ಹಾಕಲಾಗಿದೆ. ಆ ಕೇಸ್‌ನಲ್ಲಿ Public Order Hamper ಆಗಿದೆ ಎಂದು ಉಲ್ಲೇಖಿಸಿದ್ದಾರೆ.

- ಬೆಂಗಳೂರಿನಲ್ಲಿ ಈ ಸರ್ಕಾರ ಬಂದ ನಂತರ ಪೊಲೀಸ್ ಕಾಯ್ದೆ ಕಲಂ 55 ಮತ್ತು 56 ರಡಿ ಎಷ್ಟು ಜನರ ಮೇಲೆ ಗಡಿ ಪಾರು ಪ್ರಕರಣ ದಾಖಲಾಗಿದೆ. ಎಷ್ಟು ಜನರನ್ನು ಗಡಿ ಪಾರು ಮಾಡಲಾಗಿದೆ.

- 2009, 2010 ಮತ್ತು 2011ನೇ ಸಾಲಿನಲ್ಲಿ ಕ್ರಮವಾಗಿ 4720, 6500 ಮತ್ತು 4264 ಹೆಣ್ಣು ಮಕ್ಕಳು ನಾಪತ್ತೆಯಾಗಿದ್ದು, ಇದರಲ್ಲಿ 2473, 3045 ಮತ್ತು 2521 ಇದುವರೆವಿಗೂ ಪತ್ತೆಯಾಗಿಲ್ಲ. ಸರ್ಕಾರ ಮತ್ತು ಇಲಾಖೆ ಈ ನತದೃಷ್ಟ ಹೆಣ್ಣುಮಕ್ಕಳನ್ನು ಹುಡುಕಿಸಲು ಯಾವ ಪ್ರಯತ್ನ ಮಾಡಿದೆ.
- ಇವರಲ್ಲಿ ಎಷ್ಟು ಮಂದಿ ಕಳ್ಳ ಸಾಗಾಣಿಕೆ ಜಾಲಕ್ಕೆ ಸಿಕ್ಕಿ ವೇಶ್ಯಾವಾಟಿಕೆ ತಳ್ಳಲ್ಪಟ್ಟವರು ಎಷ್ಟು ಮಂದಿ?
- ನಾಪತ್ತೆಯ ಬಹುಪಾಲು ಪ್ರಕರಣಗಳು ಪೊಲೀಸ್ ಠಾಣೆಯಲ್ಲಿ ದಾಖಲಾಗುವುದೇ ಇಲ್ಲ.
- ದೇಶದಲ್ಲಿ ರಾಜ್ಯವು ಹೆಣ್ಣು ಮಕ್ಕಳ ಸಾಗಾಣಿಕೆಯಲ್ಲಿ 3ನೇ ಸ್ಥಾನದಲ್ಲಿದೆ.
- ರಾಜ್ಯದ ಬಹುತೇಕ ಲಾಡ್ಜ್‌ಗಳಲ್ಲಿ ನಡೆಯುವ ಅನೈತಿಕ ವ್ಯವಹಾರಗಳಲ್ಲಿ ಅಮಾಯಕ ಹೆಣ್ಣುಮಕ್ಕಳ ಶೋಷಣೆಯನ್ನು ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?
- ಮಾನ್ಯ ಸುಪ್ರೀಂ ಕೋರ್ಟ್ ನಿರ್ದೇಶನವಿದ್ದರೂ ಇದುವರೆವಿಗೂ ವಾಹನಗಳ ಕಿಟಕಿಯ ಬಣ್ಣದ ಪೇಪರ್‌ನ್ನು ತೆಗೆಸಿಲ್ಲ. ಇಲಾಖಾ ಅಧಿಕಾರಿಗಳಿಗೆ ಇದು ಕಾಣಿಸುವುದಿಲ್ಲವೇ.
- ಅನೈತಿಕ ಚಟುವಟಿಕೆ ಮತ್ತು ರೇಪ್‌ಗಳನ್ನು ನಿಯಂತ್ರಿಸುವ ಉದ್ದೇಶದಿಂದಲೇ ವಾಹನಗಳ ಬಣ್ಣದ ಪೇಪರ್‌ಗಳನ್ನು ತೆಗೆಯಲು ಮಾನ್ಯ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಒಂದು ವರ್ಷದಿಂದ ಇದು ಗೃಹ ಮಂತ್ರಿಯವರ ಕಣ್ಣಿಗೆ ಕಂಡಿಲ್ಲವೇ?
- ನಿಜವಾಗಿಯು ಸರ್ಕಾರ ವರದಿ ಮಾಡುವ ರೇಪ್ ಪ್ರಕರಣಗಳ ಸಂಖ್ಯೆ ಬಹಳ ಕಡಿಮೆ. ಏಕೆಂದರೆ ಹೆಚ್ಚಿನ ಪ್ರಕರಣಗಳಲ್ಲಿ ಕ್ರೈಂ ರೇಟ್‌ನ್ನು ಕಡಿಮೆ ತೋರಿಸಲು ಐಪಿಸಿ 376 ರ ಬದಲು 420 ರಡಿ ಪ್ರಕರಣ ದಾಖಲಿಸುತ್ತಾರೆ.
- ಬೆಂಗಳೂರಿನಲ್ಲಿ ಬಾರ್ ಅಂಡ್ ರಸ್ಟೋರೆಂಟ್‌ಗಳನ್ನು 11 ಗಂಟೆಯ ಬದಲಾಗಿ ಬೆಳಗಿನ ಜಾವ 1 ಗಂಟೆಯವರೆಗೆ ಯಾವ ಪುರುಷಾರ್ತಕ್ಕೆ ತೆಗೆಯಬೇಕು? ಕಾಶಪ್ಪನಂತವರು ಒಳಗೆ ಕುಡಿದು ಹೊರಗಿರುವ ಪೊಲೀಸರ ಮೇಲೆ ದಬ್ಬಾಳಿಕೆ ಮಾಡಲೇ?
- ಬೆಳಗಿನ ಜಾವ 1 ಗಂಟೆಯವರೆಗೆ ಕುಡಿದು ಅನೈತಿಕ ಚಟುವಟಿಕೆಗಳನ್ನು ನಡೆಸಲು ಪ್ರೋತ್ಸಾಹಿಸಿದ ವ್ಯವಸ್ಥೆಯ ಹಿಂದಿನ ಶಕ್ತಿ ಯಾರು? ಇದು ವ್ಯವಸ್ಥೆಯ ಲೋಪವಲ್ಲವೇ? ಇದನ್ನು ಇದುವರೆವಿಗೂ ಯಾರು ಸರಿಪಡಿಸಲು ಯಾಕೆ ಮುಂದಾಗಿಲ್ಲ?
- ದೇಶಾದ್ಯಂತ ತಮ್ಮ ಅಸ್ಥಿತ್ವದ ಅರಿವಿಲ್ಲದ, ಹೆಸರಿಲ್ಲದ ಹೆಣ್ಣು ಮಕ್ಕಳ ಮಾರಾಟ ಮತ್ತು ಮರು ಮಾರಾಟ ನಿಯಂತ್ರಣವಿಲ್ಲದೇ ತರಕಾರಿ ಮಾರಾಟದಂತೆ ವ್ಯವಹಾರ.
- ತಾಯಿ, ಸೋದರಿ, ಪತ್ನಿ ಮತ್ತು ಮಗಳಾಗಿ ಸಂತೋಷ ನೀಡುವ ಹೆಣ್ಣನ್ನು ನಾವು ಮಾರಾಟದ ವಸ್ತುವಿನಂತೆ, ಪಶುಗಳಂತೆ ವರ್ತನೆ.
- ಹೆಣ್ಣು ಮಗು ಭ್ರೂಣದ ಹಂತದಲ್ಲಿ ತೊಂದರೆಗೆ ಒಳಗಾಗುವುದು ಸಾಮಾನ್ಯ ಸಂಗತಿ.
- ಮಹಿಳೆಯರು ಮತ್ತು ಮಕ್ಕಳ ಸಾಗಾಣಿಕೆ ಒಂದು ಉದ್ಯಮ ಮತ್ತು ವ್ಯವಸ್ಥಿತ ಜಾಲ. ಇದರ ಬಗ್ಗೆ ಮಾಹಿತಿ ಕೇಳಿದರೆ ಸರ್ಕಾರ ಇದುವರೆವಿಗೂ ನೀಡಿಲ್ಲ.
- ಮಹಿಳೆಯರ ಮೇಲಿನ ಅತ್ಯಾಚಾರ / ದೌರ್ಜನ್ಯದಲ್ಲಿ ಯಾವುದೇ ಜಾತಿ, ಧರ್ಮ, ರಾಜ್ಯ ಅಥವಾ ದೇಶವೆಂಬ ಭೇಧ ಭಾವವಿಲ್ಲ.

- ಜನರಲ್ಲಿ ಕಾನೂನಿನ ಬಗ್ಗೆ ಭಯವಿಲ್ಲ. ಏಕೆಂದರೆ ಜನ ಪ್ರತಿನಿಧಿಗಳು ಮತ್ತು ಪೊಲೀಸರ ನೆರವಿನಿಂದ ಅಪರಾಧಿಗಳ ಮೇಲೆ ಸರಿಯಾಗಿ ಕೇಸ್ ದಾಖಲಿಸದೇ ಖುಲಾಸೆಯಾಗುತ್ತಾರೆ.
- ಕೆಲವು ಪ್ರಕರಣಗಳಲ್ಲಿ ಯಾರೋ ಕೊಲೆ ಮಾಡಿ, ಕೊಲೆಗಾರರೆಂದು ಶರಣಾಗುವರೇ ಮತ್ತೊಬ್ಬರು. ಇದು ಒಂದು ರೀತಿ ದಂಧೆ. ಕೆಲವು ದಿನಗಳು ಜೈಲಿನಲ್ಲಿದ್ದು, ಸಾಕ್ಷಿ ಕೊರತೆಯಿಂದ ಖುಲಾಸೆಯಾಗುತ್ತಾರೆ.
- ಇಲಾಖೆಯಲ್ಲಿ ಡ್ರೈವರ್‌ಗಳ ಕೊರತೆ ಇದೆ. ಹಿರಿಯ ಅಧಿಕಾರಿಗಳ ಬಳಿ ಎಷ್ಟು ಜನ ಆರ್ಡರ್ಲಿಗಳು ಮತ್ತು ಡ್ರೈವರ್‌ಗಳಿದ್ದಾರೆ. ಇದನ್ನು ಎಂದಾದರು ಗೃಹಮಂತ್ರಿಗಳು ರಿವಿವ್ಯೂ ಮಾಡಿದ್ದಾರ?
- ಅತ್ಯಾಚಾರಕ್ಕೆ ಒಳಗಾದ ಮಹಿಳೆಯರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು ಅತ್ಯಾಚಾರಕ್ಕಿಂತ ಹೆಚ್ಚಿನ ನರಕ ಯಾತನೆ. ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನ.
- ಎಷ್ಟೋ ಮಂದಿ ಈ ನರಕಯಾತನೆಯ ಭಯದಿಂದ ದೂರನ್ನೇ ನೀಡುವುದಿಲ್ಲ.
- ಅತ್ಯಾಚಾರ ಎದುರಿಸುವುದು ಒಂದು ಅವಮಾನ. ಠಾಣೆ ಮತ್ತು ಮಾಧ್ಯಮದಲ್ಲಿ ಅದನ್ನು ಹೇಳುವುದು ಇನ್ನೊಂದು ಅವಮಾನ. ಪ್ರಕರಣದ ವಿಚಾರಣೆಯಲ್ಲಿ ಪ್ರತಿದಿನ ನ್ಯಾಯಾಲಯಕ್ಕೆ ಅಲೆದಾಡಿ ಸಾಕ್ಷಿ ಹೇಳುವುದು ಮತ್ತೊಂದು ಅವಮಾನ.
- ದೆಹಲಿಯ ನಿರ್ಭಯ ಪ್ರಕರಣ ಮತ್ತು ಮುಂಬೈನ ಛಾಯಾಗ್ರಾಹಕಿ ಪ್ರಕರಣ ಇನ್ನೂ ಮಾಸದಿರುವಾಗ ಕರ್ನಾಟಕದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಗಳು ಹೆಚ್ಚಾಗುತ್ತಿರುವುದು ಬಹಳ ಆಘಾತಕಾರಿ ಸುದ್ದಿ.
- ಅತ್ಯಾಚಾರ ವ್ಯಾಪಕವಾಗಿ ಹಬ್ಬಲು ಸರ್ಕಾರಿ ವ್ಯವಸ್ಥೆಯಲ್ಲಿನ ಲೋಪ ಮತ್ತು ವ್ಯವಸ್ಥೆಯಲ್ಲಿನ ವ್ಯಕ್ತಿಗಳು ಕಾರಣ.
- ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಪಟ್ಟಂತೆ ಪ್ರಕರಣ ಶೀಘ್ರ ವಿಲೇವಾರಿಯಾಗಲು ಫಾಸ್ಟ್‌ಟ್ರ್ಯಾಕ್ ಮತ್ತು ವಿಶೇಷ ಕೋರ್ಟ್‌ಗಳನ್ನು ಮಾಡಬೇಕು.
- ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಆಟವಾಡುವ ಮೂರು ಮತ್ತು ಆರು ವರ್ಷದ ಮುಗ್ಧ ಹೆಣ್ಣುಮಕ್ಕಳುಗಳ ಮೇಲೆ ಅತ್ಯಾಚಾರ ಅತ್ಯಂತ ಅಮಾನುಷ.
- ಅತ್ಯಾಚಾರದ ಅರ್ಥವೇ ತಿಳಿಯದ ಮುಗ್ಧ ಕಂದಮ್ಮಗಳು ಅದಕ್ಕೆ ಬಲಿಯಾಗುತ್ತಿರುವುದು ಸಾಮಾಜಿಕ ವ್ಯವಸ್ಥೆಯ ವಿಪರ್ಯಾಸ.
- ರಾಜ್ಯದಲ್ಲಿ ಪೋಲಿಸರ ಕೊರತೆ ಇದೆ. ಪಕ್ಕದ ರಾಜ್ಯಗಳಂತೆ ಮೀಸಲು ಪಡೆಯ ಪೊಲೀಸರನ್ನು ಸಿವಿಲ್ ಕರ್ತವ್ಯಕ್ಕೆ ಬಳಸಿ, ಕೊರತೆಯನ್ನು ನಿವಾರಿಸಲು ಎಂದಾದರು ಪ್ರಯತ್ನಿಸಿದ್ದೀರಾ?
- ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಬದಲಾಯಿಸಿ, ಇಂದಿನ ಕಾಲಮಾನಕ್ಕೆ ತಕ್ಕಂತೆ ತಿದ್ದುಪಡಿ ಮಾಡಿ, ಜನರಲ್ಲಿ ಕಾನೂನಿನ ಬಗ್ಗೆ ಭಯ ಮತ್ತು ಗೌರವ ಮೂಡುವಂತೆ ಮಾಡಬೇಕು.
- ಶಾಲೆಗಳಲ್ಲಿ ಮೊಬೈಲ್ ಬಳಕೆ – ಶಕುಂತಲಾ ಶೆಟ್ಟಿ ವರದಿ
- ವಿದ್ಯಾರ್ಥಿಗಳ ವಾಚ್‌ನಲ್ಲಿ ಮೊಬೈಲ್ – ಪೋಷಕರು ಮತ್ತು ಪ್ರಿನ್ಸಿಪಾಲ್ ರವರ ನಡುವೆ ಮಾತ್ರ ಸಂಭಾಷಣೆ. Student Friendly Mobile with 3 numbers Storing only.

**<u>Mobile with siren facility</u>**

- MOBILE WITH 3 STORAGE NUMBER CAPACITY ONLY -

- MOTHER, FATHER, principal
- GLOBAL GPRS TRACKING FACILITY
- REAL TIME TRACKING FEATURES 24/7
- CALL CENTER AVAILABILITY 24/7 TO MONITOR SOS
- DEVICES INTERNAL ACCESS CONTROL, CALL CENTER
- RESTRICTED
- TAMPER PROOF
- WATER PROOF
- USER FRIENDLY
- whenever there is a danger it cautions the parents, principal and near by people by siren.
- ಶಾಲೆಗಳಲ್ಲಿ ಮತ್ತು ವಾರ್ಡ್‌ವಾರು ಸಭೆಗಳಲ್ಲಿ ಜನರಲ್ಲಿ ಕಾನೂನಿನ ಅರಿವು ಮೂಡಿಸಬೇಕು.
- ಗೃಹಮಂತ್ರಿ ಜಾರ್ಜ್ ವ್ಯರ್ಥ ಪ್ರಲಾಪ.
- ಪ್ರಕರಣ ನಡೆದ ನಂತರ ರಾಜಕೀಯ ಮೇಲಾಟಕ್ಕಾಗಿ ಚರ್ಚೆ ನಡೆಸುವ ನಾವು ವ್ಯವಸ್ಥೆಯ ಸುಧಾರಣೆಗೆ ಜನ ಪ್ರತಿನಿಧಿಗಳಾಗಿ ವ್ಯವಸ್ಥೆಯನ್ನು ಸುಧಾರಿಸಲು ಮನಸಾಕ್ಷಿಯಂತೆ ಕೆಲಸ ಮಾಡಿದ್ದೇವೆಯೇ?
- ಸರ್ಕಾರಕ್ಕೆ ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಒಂದು ವರ್ಷದಿಂದ ಪತ್ರಿಕೆಗಳ ಮೂಲಕ, ಪತ್ರ ಮೂಲಕ ಮತ್ತು ಆರ್‌ಟಿಐ ಕಾಯ್ದೆಯಡಿ ಅರ್ಜಿ ಸಲ್ಲಿಸಿ, ಮುನ್ನೆಚ್ಚರಿಕೆ ಕ್ರಮ ಜರುಗಿಸಲು ಕೋರಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ.
- ಮೂರು ವರ್ಷ ಮತ್ತು ಆರು ವರ್ಷದ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಂತರ ಸಾರ್ವಜನಿಕರ ಆಕ್ರೋಶಕ್ಕೆ ಮನ್ನಣೆ ನೀಡಿ, ಒಂದು ವರ್ಷದಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಸಂಪೂರ್ಣವಾಗಿ ವಿಫಲರಾದ ಮಾನ್ಯ ಗೃಹ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದರೆ, ಜನತೆಗೆ ಸರ್ಕಾರದ ಬಗ್ಗೆ ಒಂದು ನಂಬಿಕೆ ಬರುತ್ತಿತ್ತು. ಈಗಲಾದರು ಗೃಹ ಸಚಿವರು ರಾಜೀನಾಮೆ ನೀಡಿ, ನೈತಿಕತೆಯನ್ನು ಪ್ರದರ್ಶಿಸಲಿ.

## Incidence of Crimes Committed Against Women - Karnataka

| *Sl. No.* | Crime Head | *During the year* | | | | | | | TOTAL |
|---|---|---|---|---|---|---|---|---|---|
| | | **2007** | **2008** | **2009** | **2010** | **2011** | **2012** | **2013** | |
| 1 | Rape (376 IPC) | 436 | 446 | 509 | 586 | 636 | 621 | 1030 | **4264** |
| 2 | Kidnapping and Abduction (363,369,371,373 IPC) | 390 | 405 | 408 | 586 | 715 | 1070 | 1359 | **4933** |
| 3 | Dowry death (304B IPC) | 251 | 259 | 264 | 248 | 267 | 218 | 277 | **1784** |
| 4 | Cruelty by husband or relatives (498A IPC) | 2507 | 2638 | 3185 | 3441 | 3712 | 3684 | 3276 | **22443** |
| 5 | Molestation(354 IPC) | 1828 | 1954 | 2186 | 2544 | 2608 | 2978 | 3913 | **18011** |
| 6 | Sexual harassment (509 IPC) | 28 | 44 | 64 | 83 | 81 | 100 | 137 | **537** |
| 7 | Importing of girls (366B IPC) | 0 | 1 | 2 | 0 | 12 | 32 | 0 | **47** |
| 8 | Sati prevention Act 1987 | 0 | 0 | 0 | 0 | 0 | 0 | 0 | **0** |
| 9 | Immoral Traffic Act 1956 | 612 | 515 | 329 | 242 | 351 | 335 | 340 | **2724** |
| 10 | Indecent representation of Women(P) Act 1986 | 0 | 0 | 0 | 0 | 2 | 0 | 2 | **4** |
| 11 | Dowry Prohibition Act 1961 | 517 | 628 | 904 | 1077 | 1210 | 1328 | 1693 | **7357** |
| **TOTAL** | | **6569** | **6890** | **7852** | **8807** | **9594** | **10366** | **12027** | **62104** |

**<u>Incidence of Crime(RAPES) Committed Against Women</u>**

| *Sl. No.* | **Crime Head** | ***During the year*** | | | | | | | **TOTAL** |
|---|---|---|---|---|---|---|---|---|---|
| | | **2007** | **2008** | **2009** | **2010** | **2011** | **2012** | **2013** | |
| 1 | KARNATAKA | 436 | 446 | 509 | 586 | 636 | 621 | 1030 | **4264** |
| 2 | GUJRATH | 316 | 374 | 433 | 408 | 439 | 473 | 732 | **3175** |
| 3 | MAHARASTRA | 1451 | 1558 | 1483 | 1599 | 1701 | 1839 | 3063 | **12694** |
| 4 | TAMILNAADU | 523 | 573 | 596 | 686 | 677 | 737 | 923 | **4715** |
| 5 | KERALA | 512 | 568 | 568 | 634 | 1132 | 1019 | 1221 | **5654** |
| 6 | BANGALURU | 62 | 54 | 65 | 65 | 97 | 90 | 80 | **513** |
| 7 | MUMBAI | 174 | 218 | 182 | 194 | 221 | 232 | 391 | **1612** |
| 8 | AHAMADABAD | 37 | 44 | 6 | 49 | 60 | 63 | 116 | **375** |
| 9 | CHENNAI | 46 | 35 | 39 | 47 | 76 | 94 | 83 | **420** |

## **Incidence of TOTAL Crimes Committed Against Women**

| ***Sl. No.*** | **STATE/CITY** | ***During the year*** | | | | | | | **TOTAL** |
|---|---|---|---|---|---|---|---|---|---|
| | | **2007** | **2008** | **2009** | **2010** | **2011** | **2012** | **2013** | |
| 1 | KARNATAKA | 6569 | 6890 | 7852 | 8807 | 9594 | 10366 | 12027 | **62105** |
| 2 | GUJRATH | 8260 | 8616 | 8009 | 8148 | 8815 | 9561 | 12283 | **63968** |
| 3 | MAHARASTRA | 14924 | 15862 | 15048 | 15737 | 15728 | 16353 | 24895 | **118547** |
| 4 | TAMILNAADU | 7811 | 7220 | 6051 | 6708 | 6940 | 7192 | 7475 | **49397** |
| 5 | KERALA | 7837 | 8117 | 8049 | 9463 | 11288 | 10930 | 11216 | **66900** |
| 6 | BANGALURU | 1240 | 1243 | 1471 | 1570 | 1890 | 2263 | 2608 | **12285** |
| 7 | MUMBAI | 1353 | 1571 | 1332 | 1409 | 1700 | 1781 | 2946 | **12092** |
| 8 | AHAMADABAD | 1535 | 1474 | 1474 | 1564 | 1762 | 1805 | 2449 | **12063** |
| 9 | CHENNAI | 907 | 553 | 437 | 420 | 697 | 832 | 838 | **4684** |

**Rape at the national level, number of Police – recorded offences**

| Years | 2003 | 2004 | 2005 | 2006 | 2007 | 2008 | 2009 | 2010 | 2011 | 2012 |
|---|---|---|---|---|---|---|---|---|---|---|
| USA | 93883 | 95089 | 94347 | 94472 | 92610 | 90750 | 89241 | 85593 | 84175 | 84376 |
| **Rate for 1,00,000 Polulation** | 32.1 | 32.2 | 31.6 | 31.4 | 30.5 | 29.6 | 28.8 | 27.4 | 26.7 | 26.6 |
| INDIA | - | 18233 | 18359 | 19348 | 20737 | 21467 | 21397 | 22172 | - | - |
| **Rate for 1,00,000 Polulation** | - | 1.6 | 1.6 | 1.7 | 1.8 | 1.8 | 1.8 | 1.8 | - | - |
| Srilanka | 1378 | 1432 | - | - | - | - | - | - | - | - |
| **Rate for 1,00,000 Polulation** | 7.1 | 7.3 | - | - | - | - | - | - | - | - |
| UK | 13272 | 14013 | 14443 | 13774 | 12673 | 13096 | 15074 | 15892 | 16038 | 16327 |